# – ಮುನ್ನುಡಿ –

"ಒಮ್ಮೆ ಹೂದೋಟದಲಿ, ಒಮ್ಮೆ ಕೆಳಕೂಟದಲಿ
ಒಮ್ಮೆ ಸಂಗೀತದಲಿ, ಒಮ್ಮೆ ಶಾಸ್ತ್ರದಲಿ"
ಒಮ್ಮೆ ಸಂಸಾರದಲಿ ಮತ್ತೊಮ್ಮೆ ಮೌನದಲಿ
ಬ್ರಹ್ಮಾನುಭವಿಯಾಗು ಮಂಕುತಿಮ್ಮ.।।"

ಕನಸು ಕಟ್ಟಿದ ಕಣ್ಣುಗಳು ಮನದ ತುಂಬಾ ಆಶಾ ಭಾವನೆಗಳು, ಸಾಧಿಸಬೇಕೆಂಬ ಛಲ, ಇದಕ್ಕೆಲ್ಲ ಹಿರಿಯರ ಬಲ, ಶಿಕ್ಷಕರ ಒಗ್ಗಟ್ಟು, ಪೋಷಕರ ಪ್ರೋತ್ಸಾಹ, ಊರವರ ಬೆಂಬಲ.... ಹೀಗೆ ಸದಾ ಬೆಳೆಯುತ್ತಿದ್ದ ಕುಗ್ರಾಮವೊಂದರ ಪುಟ್ಟ ಶಾಲೆಯು ಕಂಪನ್ನು ಎಲ್ಲಡೆಯೂ ಹರಡುತ್ತಿದೆಯೆಂದರೆ ಮುಖ್ಯಕಾರಣ ಶ್ರೀಗಂಧ ನೀಡಿದ ಕಂಪು ಎಂದರೆ ಅತಿಶಯೋಕ್ತಿಯಲ್ಲ.... ಶ್ರೀಗಂಧದ ಮರದ ನೆರಳಿನಲ್ಲಿ ಆಶ್ರಯ ಪಡೆದಿರುವ ಎಷ್ಟೋ ಶಾಲೆಗಳಲ್ಲಿ ನಾವು ಒಬ್ಬರು ಎನಲು ಅದೇನೋ ಆನಂದ.... ಅದ್ಯಾವುದೋ ಪ್ರಶಾಂತ ಭಾವ ಮನದಲ್ಲಿ.

ಶ್ರೀಗಂಧ ಕನ್ನಡ ಫೌಂಡೇಶನ್ ಹಾಗೂ ನಮ್ಮ ಸಮಟಗಾರು ಶಾಲೆಯ ಅನುಬಂಧಕ್ಕೀಗ ದಶಕದ ಸಂಭ್ರಮವೆನಲು ಹರ್ಷವೆನಿಸುತ್ತಿದೆ. ಈ ಸಂತಸದ ಸಮಯದಲ್ಲಿ ನಮ್ಮ ಶಾಲೆಗೆ ಹತ್ತು ಹಲವು ರೀತಿಯಲ್ಲಿ ಸಹಕಾರ ನೀಡುವ ಮೂಲಕ ಹಳ್ಳಿಯ ಮುಗ್ಧ ಮಕ್ಕಳ ಕಲಿಕೆಗೆ ಪ್ರೋತ್ಸಾಹ ನೀಡುತ್ತಾ ಬಂದಿರುವ, ತಂದೆ ತಾಯಿಯರ ಹೊರೆ ಕಡಿಮೆ ಮಾಡುತ್ತಾ ನಮ್ಮ ಏಳಿಗೆಗೆ ಕಾರಣರಾಗಿರುವ... ನಮ್ಮ ಶಾಲೆಯ ಏಳಿಗೆಗೆ ಕಾರಣ-ರಾಗಿರುವ ಶ್ರೀಗಂಧ ಫೌಂಡೇಶನ್ ಬಗ್ಗೆ...—ಅವರ ಮತ್ತು ಶಾಲೆಯ ನಡುವಿನ ಭಾವಬಂಧದ ನುಡಿನಮನ ಸಲ್ಲಿಸುವ ಪುಟ್ಟ ಪ್ರಯತ್ನವೇ ಈ ಕಿರುಹೊತ್ತಿಗೆ... ಊರ ಹಿರಿಯರು, ಶಿಕ್ಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರುಗಳು, ಸದಸ್ಯರುಗಳು –

ಶಾಲೆಯ ವಿದ್ಯಾರ್ಥಿಗಳ , ಪುಟ್ಟ ಮಕ್ಕಳ ಕೈಬರಹದ ಕಿರುಹೊತ್ತಿಗೆಯಿದು. ನೀವು ನೀಡಿದ ಬೆಲೆಕಟ್ಟಲಾರದ ಸಹಾಯಕ್ಕೆ, ಸಹಕಾರಕ್ಕೆ ನಮ್ಮ ಸಮಟಗಾರ ಕುಟುಂಬ ತಮ್ಮ ಭಾವನೆಗಳನ್ನು ಅಕ್ಷರ ರೂಪದಲ್ಲಿ ನೀಡಲು ಪ್ರಯತ್ನಿಸಿದ್ದೇವೆ. ಇದನ್ನು ಪ್ರೀತಿಯಿಂದ ಅಪ್ಪಿಕೊಳ್ಳಿ.....

ಈ ಕಿರುಹೊತ್ತಿಗೆಯನ್ನು ತರಲು ಸಹಕರಿಸಿದ ಹಿರಿಯರಾದ ಶ್ರೀ ಶ್ರೀಧರಮೂರ್ತಿಯವರಿಗೂ, ಪ್ರೀತಿಯ ಶಿಕ್ಷಕವೃಂದಕ್ಕೂ, ಹಿಂದಿನ, ಈಗಿನ S.D.M.C ಅಧ್ಯಕ್ಷರೂ, ಸದಸ್ಯರಿಗೂ , ಶಾಲೆಯ ವಿದ್ಯಾರ್ಥಿಗಳಿಗೂ, , ಶಾಲೆಯ ಪುಟ್ಟ ಮಕ್ಕಳಿಗೂ ಧನ್ಯವಾದವನ್ನು ಅರ್ಪಿಸುತ್ತೇನೆ.....

— ನಹಿ ಜ್ಞಾನೇನ ಸದೃಶಂ —

ಶ್ರೀಮತಿ ರತ್ನಕುಮಾರಿ. ಬಿ. ಎನ್
ಮುಖ್ಯ ಶಿಕ್ಷಕಿ.
ಸ॥ ಹಿ॥ ಪ್ರಾ॥ ಶಾಲೆ ಸಮಟದಾರ.

# ಶ್ರೀಗಂಧ ಸಂಬಂಧ

ಶ್ರೀಗಂಧ ಟ್ರಸ್ಟ್‌ನೊಂದಿಗಿನ ನಮ್ಮ ಸಂಬಂಧಕ್ಕೆ ಸಂದ ವರ್ಷಗಳು 10.... ಹೌದೆ? ಕೆಲವು ಸಂಬಂಧಗಳೇ ಹೀಗೆ, ಕಾಲ ಕಳೆದು ಹೋದದ್ದೇ ತಿಳಿಯುವುದಿಲ್ಲ ಅಷ್ಟೊಂದು ಕ್ಲೋಸ್ ಆಗಿರುತ್ತವೆ.

ಹತ್ತು ವರ್ಷಗಳ ಹಿಂದೆ ಶ್ರೀಗಂಧ ಇಷ್ಟೊಂದು ಬೃಹತ್ತಾಗಿ ಬೆಳೆದಿರಲಿಲ್ಲ. ಈಗ "ಶ್ರೀಗಂಧ ಟ್ರಸ್ಟ್" ಆಗಿ ರಾಜ್ಯ ವಿಸ್ತಾರದಲ್ಲಿ ಬೆಳೆದು ನಿಂತಿದೆ. ಅಷ್ಟೇ ಶ್ರಮಿಸುವ ಹನುಮಂತಪ್ಪನವರು! ಶಿಕ್ಷಣ ವರ್ಷದ ಆರಂಭದಲ್ಲಿ ಶ್ರೀಗಂಧದ ನಿರೀಕ್ಷೆಯಲ್ಲಿ ನಿಂತುಕೊಳ್ಳುವ ಶಾಲೆಗಳ ಸಂಖ್ಯೆ ಅಧಿಕವಾಗಿದೆ.

ಅರ್ಹ ಶಾಲೆಗಳ ಎಲ್ಲ ಮಕ್ಕಳಿಗೆ ವರ್ಷಕ್ಕೆ ಅಗತ್ಯವಾದಷ್ಟು ನೋಟ್‌ಬುಕ್, ಪೆನ್ನು.... ಇಂತಹ ವಸ್ತುಗಳನ್ನು, ಶಿಕ್ಷಣ ವರ್ಷದ ಪ್ರಾರಂಭದಲ್ಲಿ ನೀಡುವ ಕಾರ್ಯವನ್ನು ಶ್ರೀಗಂಧದವರು ವ್ರತದಂತೆ ನಡೆಸಿಕೊಂಡು ಬರುತ್ತಿದ್ದಾರೆ. ಕೊಡುವುದು ಎಷ್ಟು ಮುಖ್ಯವೋ ಕೊಡುವ ಕ್ರಮವೂ ಅಷ್ಟೇ ಮುಖ್ಯ... ಅಲ್ಲ! ಅದಕ್ಕಿಂತಲೂ ಅಧಿಕ ಮುಖ್ಯ.

ಶ್ರೀಗಂಧದವರು ತಂಡ ತಂಡಗಳಾಗಿ ಬೇರೆ ಬೇರೆ ಶಾಲೆಗಳಿಗೆ ಭೇಟಿ ನೀಡಿ, ಮಕ್ಕಳು-ಶಿಕ್ಷಕರು-ಊರಿನವರೊಂದಿಗೆ ಆತ್ಮೀಯವಾಗಿ ಬೆರೆತು ಕೊಡುವುದುಂಟಲ್ಲ... ಇದನ್ನು ಮೆಚ್ಚಬೇಕು. ಈ ಉಪಕ್ರಮದಿಂದ "ದೀನ ನಾನು ದಾನಿ ನೀನು" ಎಂಬ ಭಾವನೆಯು ಬರುವುದೇ ಇಲ್ಲ.

ಗಂಧ ಶಬ್ದಕ್ಕೆ ಪರಿಮಳ ಎಂಬ ಅರ್ಥವಿದೆ. ಸ್ನೇಹ, ಸೌಜನ್ಯ, ಸರಳತೆ, ಆತ್ಮೀಯತೆ... ಇಂತಹ ಶ್ರೇಷ್ಠ ಗುಣಗಳನ್ನು ಆಲಂಕಾರಿಕವಾಗಿ ಗಂಧ ಎನ್ನುವುದುಂಟು. ಶಿಕ್ಷಣಕ್ಕೆ ಪ್ರೋತ್ಸಾಹಕವಾಗಿ ನೀಡುವ ಕೊಡುಗೆಗಳೊಂದಿಗೆ ಆಲಂಕಾರಿಕ ಅರ್ಥದ ಗಂಧವನ್ನು ಬೀರುವ ಶ್ರೀಗಂಧದವರು ಉತ್ತಮ ಗಂಧವಾಹಕರೂ ಹೌದು.

ಶ್ರೀಗಂಧ ಟ್ರಸ್ಟಿನ ಕೆಲಸಗಳಲ್ಲಿ ತೊಡಗಿ ಕೊಳ್ಳುವ ವ್ಯಕ್ತಿಯನ್ನು 'ಯೋಧ" ಎಂದು ಗುರುತಿಸಿಕೊಳ್ಳುತ್ತಾರೆ. ಈ ಯೋಧರದು war without guns! ಇವರು ಗೆಲ್ಲುತ್ತಾರೆ ಸಂತೋಷಗಳನ್ನು ಗಳಿಸುತ್ತಾರೆ. ಇವರ war ಬೆಳೆಯಲಿ-ಬೆಳಗಲಿ. ಸದಾ ಶುಭವಿರಲಿ

ಶ್ರೀಧರ ಮೂರ್ತಿ ಕೆ. ಎಸ್.

ಶ್ರೀ ದೇವರ ಗರ್ಭಗುಡಿಯಲಿ ಘಮಘಮಿಸುವ ಶ್ರೀಗಂಧ. ವಿಪುಲ ಮಕ್ಕಳನ್ನು ಹೊಂದಿರುವ ನಮ್ಮ ಶಾಲಾ ಗರ್ಭಗುಡಿಯಲ್ಲಿ ದಶಕ ಕಂಡಿದ್ದೀರಿ ಶತಕವನ್ನು ಕಾಣುವಂತೆ ಘಮಘಮಿಸುತ್ತಿರಲಿ ಎಂದು ಹಾರೈಸುತ್ತೇನೆ.

ಶ್ರೀ ಅನಂತರಾವ್
ಕಡಸೂರು.

ಕನ್ನಡ ನಾಡನುಡಿ ಕನ್ನಡದ ನಾಡನಿಂ
ಎಲ್ಲಿಯೂ ಬಗಡಿಕಾಣೆ...
ಕನ್ನಡದ ಕೋಗಿಲೆಯ ರಮಣೀಯ ಗಾನಕ್ಕೆ
ಎದೆಸೋತ ದೇವರಾಣೆ...

ಎಂತಹ ಅದ್ಭುತ ಈ ಸಾಹಿತ್ಯ, ತಾಯ್ನುಡಿ ಈ ಕನ್ನಡಕ್ಕಾಗಿ ಶ್ರೀಗಂಧದಂತೆ ಸವೆದು ಸುಗಂಧ ಬೀರುತ್ತಿರುವ ತಾಯಿಸೇವೆಗೆ ಕಂಕಣ ಕಟ್ಟಿರ ಕನ್ನಡದ ಸಹೃದಯಿಗಳು ನಮ್ಮೊಂದಿಗೆ ಬೆಸೆದು ಹತ್ತು ವರ್ಷಗಳು ಸಂದಿವೆ.

ಸಿಂಹಾವಲೋಕನದಿಂದೊಮ್ಮೆ ಹಿಂದಿರುಗಿ ನೋಡಿದಾಗ ಮನ ಪುಳಕಗೊಳ್ಳುತ್ತದೆ. ಸಂಭ್ರಮ-ಸಂತಸದ ನೆನಪಿನ ಮೆರವಣಿಗೆ ಸಾಲು-ಸಾಲಾಗಿ ಕಣ್ಣಿಗೆ ಹಬ್ಬ ತರುತ್ತದೆ.

ಶ್ರೀಗಂಧ ಕನ್ನಡ ಬಳಗದಿಂದ ಶ್ರೀಗಂಧ ಫೌಂಡೇಶನ್ ಆಗಿ ಬದಲಾಗಿ ತನ್ನ ಬೇರುಗಳನ್ನು ಕರ್ನಾಟಕದಾದ್ಯಂತ ಚಾಚಿ, ಕಲಿವ ಮನಗಳಿಗೆ, ಕಲಿಸುವ ಗುರುಗಳಿಗೆ ಇಡೀ ಸಮಾಜಕ್ಕೆ ನೆರಳಾಗಿ ನಿಂತಿರುವ ಈ ಶ್ರೀಗಂಧ ಫೌಂಡೇಶನ್ ಸಸಿಯಿರುವಾಗಲೇ ಅದರ ಆಶ್ರಯ ಪಡೆದು ಇಂದು ಹೆಮ್ಮರವಾಗಿ ನಿಂತ ಈ ಸಂಸ್ಥೆಯ ಅಗಾಧ ಶಕ್ತಿ ಸ್ಫೂರ್ತಿಯ ಬಗ್ಗೆ ಹೆಮ್ಮೆ ಪಡುತ್ತಿರುವ ಅಭಿಮಾನ ಸ್ಫುರಿಸುತ್ತಿರುವ ಜೀವಗಳು ನಾವು.

ಸಮಾಜದ ಶತ್ರುಗಳಾದ ಅನಕ್ಷರತೆ, ನಿರುದ್ಯೋಗ, ಅನಾರೋಗ್ಯ, ಮಾಲಿನ್ಯ, ಬಡತನ ಇಂತಹ ಶತ್ರುಗಳನ್ನು ಹುಡುಕಿ ಹುಡುಕಿ ತಮ್ಮ 'ಸಹಾಯ ಹಸ್ತ' ವೆಂಬ ಆಯುಧದಿಂದ ಕೊಲ್ಲುತ್ತಿರುವ, ಸಶಕ್ತ ಸಮಾಜ ನಿರ್ಮಿಸುತ್ತಿರುವ ಶ್ರೀಗಂಧ ಯೋಧರ ನಡೆ ಆದರಣೀಯ, ಅನುಕರಣೀಯ, ಆದರ್ಶನೀಯ. ಈ ಬಳಗದ ಎಲ್ಲ ಸದಸ್ಯರ ಸರಳತೆ, ಮಾನವೀಯತೆ, ಹೃದಯಶೀಲತೆ, ಪರೋಪಕಾರತ್ವ ಹೀಗೂ ಇರಬಹುದಾ ಎನ್ನಿಸುವಂತೆ. ಸದಾ ನೆನಪಾಗುವುದು.

ಶ್ರೀಗಂಧ ಕನ್ನಡ ಬಳಗದ ಸದಸ್ಯರು ಮೊದಲ ವರ್ಷ ಬಂದಾಗ ನಮ್ಮಲ್ಲಿ ಕೊಂಚ ಅಳುಕು, ಭಯ, ಕಾತರವೆಲ್ಲ ಕರಗಿ ಇಂದಿಗೆ ದಶಕಗಳು ಸಂದಿವೆ ಎಂದರೆ ನಂಬಲಾಗುತ್ತಿಲ್ಲ. ನೀವು ನಮ್ಮ ಶಾಲೆಗೆ ಕೊಟ್ಟಿರುವ ವಸ್ತುಗಳು ಸೌಲಭ್ಯಗಳಿಗೆ ಧನ್ಯವಾದ ತಿಳಿಸಲು ಶಬ್ದಗಳಿಲ್ಲ. ಆದರೆ ಅದಕ್ಕಿಂತ

ಮುಗಿಲು ನೀವು ಇಟ್ಟ ಪ್ರೀತಿ, ಅಭಿಮಾನ, ಅಕ್ಕರೆ ಇದು ಅಮೂಲ್ಯ ಬೆಲೆ ಕಟ್ಟಲಾಗದ್ದು. ನಿಮ್ಮ ಪ್ರೀತಿ ನಮ್ಮೊಂದಿಗೆ ಸದಾ ಹೀಗೆ ಇರಲಿ...

ತೇಯ್ದಷ್ಟೂ ಘಮಘಮಿಸುತ ಶ್ರೇಷ್ಠ ಸುಗಂಧ ನೀವು...
ನಿಮ್ಮ ಸ್ನೇಹದಿಂದ ಪುನೀತಗೊಂಡ ಜೀವಗಳು ನಾವು...
ಕನ್ನಡ ನಾಡಿನುದ್ದಕ್ಕೂ ಚಾಚಲಿ ಶ್ರೀಗಂಧದ ಬೇರು....
ನಿರುತವಾಗಿ ಎಳೆಯುತಿರಲಿ ಕನ್ನಡಾಂಬೆ ತೇರು....

ಅಂಬಿಕಾ. ಎಲ್. ಯು
ಸಹಶಿಕ್ಷಕರು.
ಸ. ಹಿ. ಪ್ರಾ. ಶಾಲೆ.
ಸೆಮುಬಗಾರು.

"ಶ್ರೀ ಗಂಧ ಫೌಂಡೇಶನ್‌ನ 'ಮಂತ್ರ'

ಸಮೆಟಗಾರು ಶಾಲೆಯ ಮಕ್ಕಳ ಶಿಕ್ಷಣಕ್ಕೆ ಗಂಧದ 'ತಂತ್ರ'

ಇವರ ಮಾತೇ ಈ ಶಾಲೆಯ ಮಕ್ಕಳಿಗೆ 'ಇಂತ್ರ'

ಶ್ರೀ ಗಂಧದ ಫೌಂಡೇಶನ್ ಕೊಡುಗೆಯಲ್ಲಿರಲಿ

ಮಕ್ಕಳಿಗೆ ಇವರ 'ನೆನಪು ನೆನಪು'.....

ಸ. ಹಿ. ಪ್ರಾ. ಶಾಲೆ ಸಮೆಟಗಾರು ಈ ಶಾಲೆಗೆ ಕಳೆದ ಹತ್ತು ವರ್ಷಗಳಿಂದ ಈ ಶಾಲೆಯ ಮಕ್ಕಳಿಗೆ ನೀವು ನೀಡುತ್ತಿರುವ ಕಲಿಕಾ ಸಾಮಗ್ರಿಗಳು ಮಕ್ಕಳ ಶಿಕ್ಷಣಕ್ಕೆ ಒಂದು ಉತ್ತಮ ರೀತಿಯಲ್ಲಿ ಸಹಕಾರಿಯಾಗುತ್ತದೆ. ಹಾಗೆಯೇ ಈ ಶಾಲೆಯಲ್ಲಿರುವ ಶಿಕ್ಷಕರಾದ ಶಿಲ್ಪಕುಮಾರಿ ಟೀಚರ್ ಮತ್ತು ಅಂಬಿಕಾ ಟೀಚರ್ ಇವರಿಬ್ಬರು ಈ ಶಾಲೆಯ ಒಂದು ಭವ್ಯವಾದ ನಿರ್ಮಾಣಕ್ಕೆ ಕಾರಣಕರ್ತರು ಮತ್ತು ಇವರಿಬ್ಬರ ಶ್ರಮವೂ ತುಂಬಾ ಇದೆ. ಈ ಶಾಲೆಯಲ್ಲಿರುವ ಉತ್ತಮ ಕಲಿಕಾ ವಾತಾವರಣ ಹಾಗೂ ಸಹ ಪಠ್ಯೇತರ ಚಟುವಟಿಕೆಗಳಿಂದ ಮಕ್ಕಳಿಗೆ ಕಲಿಯುವ ಅವಕಾಶ ತುಂಬಾ ಇದೆ. ಹಾಗೆಯೇ ದೂರದ ಊರುಗಳಿಂದ ಈ ಶಾಲೆಗೆ ವಿದ್ಯೆ ಕಲಿಯಲು ಅತೀ ಆಸಕ್ತಿಯಿಂದ ಬರುವ ಮಕ್ಕಳು ಇವರ ಪೋಷಕರು ಮಕ್ಕಳ ಮೇಲಿಟ್ಟಿರುವ ಉಜ್ವಲವಾದ ಭವಿಷ್ಯದ ನಿರ್ಮಾಣಕ್ಕೆ ಈ ಶಾಲೆಯಲ್ಲಿ ನೀಡುವ ಶಿಕ್ಷಣ, ಸಂಸ್ಕೃತಿ, ಶ್ಲೋಕ, ಹಾಡು, ನೃತ್ಯ ಇವೆಲ್ಲವುಗಳೇ ಸಾಕ್ಷಿಯಾಗಿದೆ. ಈ ಶಾಲೆಗೆ ಬರುವ ಮಕ್ಕಳ ಶಿಕ್ಷಣಕ್ಕೆ ಬೇಕಾದ ಉಚಿತ ಕಲಿಕಾ ಸಾಮಗ್ರಿಗಳನ್ನು ನೀವು ನೀಡುತ್ತಿರುವುದರಿಂದ, ಪೋಷಕರ ಖರ್ಚಿನ ಹೊರೆಯು ಸ್ವಲ್ಪ ಮಟ್ಟಿಗೆ ಕಡಿಮೆಯಾಗಿದೆ. ಈ ರೀತಿಯ ಎಲ್ಲಾ ಸಹಾಯವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಉತ್ತಮವಾಗಿ ವ್ಯಾಸಂಗ ಮಾಡಿ, ಮುಂದೊಂದು ದಿನ ಆದರ್ಶ ವ್ಯಕ್ತಿಗಳಾಗಿ ಉನ್ನತ ಹುದ್ದೆಯನ್ನು

ಪಡೆದುಕೊಂಡು ಅವರ ತಂದೆ-ತಾಯಿಗೆ ಕೀರ್ತಿಯನ್ನು ತಂದುಕೊಡಲಿ ಎಂದು ಆಶಿಸುತ್ತೇನೆ.

ನಾನು ಕಳೆದ 4 ವರ್ಷಗಳಿಂದ ಈ ಶಾಲೆಯಲ್ಲಿ ಅತಿಥಿ ಶಿಕ್ಷಕಿಯಾಗಿ ಸೇವೆಯನ್ನು ಸಲ್ಲಿಸುತ್ತಿರುವುದು ನನಗೆ ಸಂತಸ ತಂದಿದೆ.

" ಶ್ರೀಗಂಧ ತಂಡದವರು ನಮ್ಮ ಶಾಲೆಯ ಮೇಲಿಟ್ಟಿರುವ ಪ್ರೀತಿ, ವಿಶ್ವಾಸ ಗೌರವ ಎಂದಿಗೂ ಶಾಶ್ವತವಾಗಿರಲಿ ಎಂದು ಹಾರೈಸುವೆ.

- ಶಶಿಕಲಾ. G.K
ಅತಿಥಿ ಶಿಕ್ಷಕಿ

# ನುಡಿನಮನ

"You gave without bounds, without fame,
Expecting nothing, but our school's name.
In every gift, a piece of your heart,
Forever changing our brand new start."

'ಶ್ರೀಗಂಧ ಬಳಗ', ಈ ಹೆಸರೇ ನಮ್ಮ ಶಾಲೆಯ ಸ್ಫೂರ್ತಿಯ ಚಿಲುಮೆ. ನಿಮ್ಮೊಂದಿಗಿನ ಈ ಹತ್ತು ವರ್ಷಗಳ ಸುದೀರ್ಘ ಪಯಣವನ್ನು ಪದಗಳಲ್ಲಿ ವಿವರಿಸಲಾಗದಂತಹ ನಂಟು ನಮ್ಮ ಶಾಲೆಯದು. ನೀವು ನಮ್ಮ ಶಾಲೆಗೆ ನೀಡಿರುವ ಹಲವಾರು ಸೌಲಭ್ಯಗಳಿಂದ ಉಪಯೋಗ ಪಡೆದವರಲ್ಲಿ ನಾನೂ ಕೂಡಾ ಒಬ್ಬಳಾಗಿರುವುದು ನನಗೆ ಸಂತಸದ ವಿಷಯವಾಗಿದೆ. ನಾನು ಸತತವಾಗಿ ಏಳು ವರ್ಷಗಳ ಕಾಲ ನಿಮ್ಮ ಈ ಅಮೂಲ್ಯ ಸೇವೆಯನ್ನು ಪಡೆದಿದ್ದೇನೆ. ಪ್ರತಿ ವರ್ಷವೂ ನಿಮ್ಮ ತಂಡ ತಪ್ಪದೆ ನಮ್ಮ ಶಾಲೆಗೆ ಆಗಮಿಸಿ ಎಲ್ಲಾ ವಿದ್ಯಾರ್ಥಿಗಳೊಂದಿಗೆ ಸಂತೋಷದಿಂದ ಕಾಲಕಳೆದು, ನಮ್ಮ ವಿದ್ಯಾರ್ಜನೆಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ನೀಡಿದ್ದರಿಂದ ಎಲ್ಲಾ ಪೋಷಕರಿಗೆ ತುಂಬಾ ಸಹಾಯವಾಗಿದೆ." ನಿಮ್ಮ ಅಷ್ಟೂ ಸ್ಫೂರ್ತಿದಾಯಕ ಮಾತುಗಳೇ ನಮ್ಮ ಸಾಧನೆಯ ದಾರಿದೀಪವಾಗಿದೆ.

ಹಳ್ಳಿ ಮೂಲದ ಸರ್ಕಾರಿ ಶಾಲೆಗಳಿಗೆ ನೀವು ನೀಡುತ್ತಿರುವ ಪ್ರೋತ್ಸಾಹ ಅಮೋಘವಾದದ್ದು. ನಿಮ್ಮ ಅನುಭವದ ಮಾತುಗಳು ನಮಗೆ ಸದಾ ಸ್ಫೂರ್ತಿದಾಯಕವಾಗಿವೆ. ಶ್ರೀಗಂಧದ ಮರ ಹೇಗೆ ಎತ್ತರವಾಗಿ ಬೆಳೆದು ತನ್ನ ಸುವಾಸನೆಯನ್ನು ಎಲ್ಲೆಡೆ ಬೀರಿ ದೈವಿಕ ಭಾವನೆಯನ್ನು ನೀಡುತ್ತದೆಯೋ ಹಾಗೆ ನಿಮ್ಮ ಈ ಸಹಾಯದ ಗುಣ ಎಲ್ಲಾ ಸರ್ಕಾರಿ ಶಾಲೆಗಳಿಗೂ ನೆರವಾಗಿದೆ. ನಿಮ್ಮ ಆಶೀರ್ವಾದ ಮತ್ತು ಪ್ರೋತ್ಸಾಹವೇ ನಮಗೆ ಸ್ಫೂರ್ತಿ. ನಮ್ಮ ಶಾಲೆಯ ಮೇಲಿರುವ ನಿಮ್ಮ ಈ ಅಭಿಮಾನಕ್ಕೆ ನಾವು ಸದಾ ಚಿರಋಣಿ. ನೀವು ನೀಡುತ್ತಿರುವ ಎಲ್ಲಾ ಸೌಲಭ್ಯಗಳು ಮುಂದೊಂದು ದಿನ ಈ ರಾಷ್ಟ್ರಕ್ಕೆ ದೊಡ್ಡ-ದೊಡ್ಡ ವ್ಯಕ್ತಿಗಳ ರೂಪದಲ್ಲಿ ಕೊಡುಗೆಯಾಗಲಿದೆ ಎಂಬುದು ನನ್ನ ಆಶಯ. "ಶ್ರೀಗಂಧದ ಕೊರಡು ತೇದಷ್ಟು ಪರಿಮಳ" ಇದರಲ್ಲಿ ಯಾವುದೇ ಕಲ್ಪಿತಗಳಿರುವುದಿಲ್ಲ. ಈ ಬಳಗ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಯಲಿ, ಸಾಕಷ್ಟು ವಿದ್ಯಾರ್ಥಿಗಳ ಜೀವನಕ್ಕೆ ಬೆಳಕಾಗಲಿ ಎಂದು ಇಚ್ಛಿಸುತ್ತೇನೆ. ನಿಮ್ಮ ಮತ್ತು ನಮ್ಮ ಶಾಲೆಯ ನಂಟು ಸದಾಕಾಲ ಹೀಗೆ ಮುಂದುವರೆಯಲಿ. ಈ ಹತ್ತು ವರ್ಷಗಳ ನಿಮ್ಮ ಪ್ರೀತಿ, ವಿಶ್ವಾಸ, ನಂಬಿಕೆ ಮತ್ತು ನಿಷ್ಕಲ್ಮಶ ಸೇವೆಗೆ ನನ್ನ ನಮನಗಳು.....

" Ten years of pencils, papers, and dreams,
Your kindness helped our school team beam.
From classrooms to futures bright,
Thank you for your endless light."

Your Obediently
Vaidehi. S.
10th.

ಬಿಳಲಲ್ಲ, ಬೇರಲ್ಲ, ದಿಂಡುಕಾಂಡಗಳಲ್ಲ।
ತಳಿರಲ್ಲ, ಮಲರಲ್ಲ, ಕಾಯಿ ಹಣ್ಣಲ್ಲ॥
ಎಲೆ ನೀನು; ವಿಶ್ವವೃಕ್ಷದೊಳ್, ಎಲೆಯೊಳೊಂದು ನೀಂ।
ತಿಳಿದವನೆ ನೆರವಾಗು - ಮಂಕುತಿಮ್ಮ॥....

ಶ್ರೀಗಂಧ ಶಿಂಡೇಕರನ ಆಹಾ! ಹೆಸರಲ್ಲೇ ಇದೆ ಶ್ರೇಷ್ಠತೆ. ಪ್ರೇಮ ಉದಾರ ಹೃದಯ. ನಮ್ಮಂತಹ ಹಳ್ಳಿಗರಿಗೆ ಸರ್ಕಾರಿ ಶಾಲೆಗಳೇ ಆಸರೆಂದು ನಾವು. ನನ್ನಂತಹ ಬಹಳಷ್ಟು ಪೋಷಕರ ಆಸೆ. ಕನಸು. ನನ್ನ ಮಕ್ಕಳು ಒಂದು ಗುರಿಯನ್ನ ತಲುಪಬೇಕು. ಅವರ ಜೀವನ ಚೆನ್ನಾಗಿ ಇರಬೇಕು. ಮನದಲಿ ಆಸೆಗಳು ನೂರಾರು, ಆದರೆ ಅವುಗಳಿಗೆ ಆಸರೆ ಯಾರು? ಕಣ್ಣಿನಲ್ಲಿ ಕನಸುಗಳು ಸಾವಿರಾರು ಆದರೆ ಅವುಗಳಿಗೆ ಸ್ಫೂರ್ತಿ ತುಂಬಿ ಪ್ರೋತ್ಸಾಹ ನೀಡುವವರು ಯಾರು?... ಎಂಬ ಪ್ರಶ್ನೆ ತುಂಬಾ ಸಲ ನನ್ನ ಮನಸ್ಸಿನಲ್ಲಿ ಮೂಡುವ ಪ್ರಶ್ನೆಯಾಗಿತ್ತು. ನಾನು ನನ್ನ ಮಕ್ಕಳನ್ನ ಸಮುಟಗಾರು ಶಾಲೆಗೆ ಸೇರಿಸಿದ ನಂತರ ನನಗೆ ತುಂಬಾ ನೆಮ್ಮದಿ ಇತ್ತು. ತನ್ನ ಮಕ್ಕಳ ಭವಿಷ್ಯ ಹೇಗಿರತ್ತೋ. ಏನಾಗುತ್ತೋ ಅಂತ. ಉತ್ತಮ ಶಿಕ್ಷಕರು, ಅವರ ಜೊತೆ ಹಲವಾರು ಅನುಭವಸ್ಥರು. ಅವರ ಜೊತೆ ಸಂಗಮ. ಎಂಬಂತೆ ಜೊತೆ ಸೇರಿಕೊಂಡ ಶ್ರೀಗಂಧ ಶಿಂಡೇಕರನ ಒಮ್ಮೆ. ಮೊದಲ ಬಾರಿಗೆ ನಾನು ಅಧ್ಯಕ್ಷನಾದಾಗ ಎಸ್.ಡಿ.ಎಮ್.ಸಿ. ಶ್ರೀಗಂಧ ಶಿಂಡೇಕರನವರು ಮಕ್ಕಳಿಗೆ ಪುಸ್ತಕಗಳು ಇನ್ನಿತರ ವಸ್ತುಗಳನ್ನು ನೀಡಲು ಬರುತ್ತಿದ್ದರು ಎಂದು ಗೊತ್ತಿತ್ತು. ಆದರೆ ನನಗೆ ಅನುಭವ ಇರಲಿಲ್ಲ. ನಾನು ಅಧ್ಯಕ್ಷನಾದಾಗ ಮೊದಲ ಬಾರಿಗೆ ಶ್ರೀಗಂಧ ಬಳಗದವರು ಬರುತ್ತಾರೆ. ಆವಾಗ ನನಗೆ ಏನೋ ಕುತೂಹಲ. ಜೊತೆಗೆ ಮನಸಲ್ಲಿ ಒಂದು ತರ ಕಳವಳ ಅಂಜಿಕೆ. ಬೆಂಗಳೂರಿನಿಂದ ಇಲ್ಲಿಗೆ ಬರುತ್ತಿದ್ದಾರೆ. ಅವರಿಗೆ ತುಂಬಾ ಅನುಕೂಲವಿರತ್ತೆ. ಅವರ ಜೊತೆ ನಾನು ಹೇಗೆ ಇರಬೇಕು. ಹೇಗೆ ನಡೆದುಕೊಳ್ಳಬೇಕು. ಅವರು ತುಂಬಾ ಓದಿಕೊಂಡವರು.

ನಾನು ಅವರೊಡನೆ ಮಾತಾಡಿದರೆ ಏನಾದರೂ ತಪ್ಪಾಗಬಹುದು
ಎಂಬ ಅಂಜಿಕೆಗೆ. ಆದರೆ ಅವರನ್ನು ಮೊದಲ ಬಾರಿ ಭೇಟಿ ಎಲ್ಲಾ ನನ್ನ
-ಯಾದ ಕ್ಷಣಗಳು ಅವರ ಸಹಜವಾಗಿತ್ತು. ಮಾತು ಒಂದು ಸಂತಸದ ಕಿ
ಕಣ್ಣಿನಲ್ಲಿ ಕಟ್ಟಿದಂತಿದೆ. ಮನದಲ್ಲಿ ಏನೋ ಒಂದು ಕಷ್ಟ ಮಗಿಗಳ
-ಡಿ. ನನಗೆ ಶ್ರೀಗಂಧದ ವೆಂಕಟೇಶನ ಅವರು ಕಷ್ಟ ಸುಂದರಗೊಳ್ಳ
ಜೀವ ಭವ್ಯ ಭವಿಷ್ಯದ ಕನಸಿಗೆ ಬಣ್ಣ ತುಂಬಿ ಜೊತೆ ಕ್ಷ
ಸಲು ಬಂದವರಂತೆ ಕಾಣುತ್ತಿದ್ದರು. ಅವರು ಮಕ್ಕಳ ಪ್ರೋತ್ಸಾಹದ
ದ ಕ್ಷಣಗಳು. ಆಚಾರ ಅನುಭವದ ಮಾತುಗಳು, ಭರವಸೆಯ ದಾರಿಗಳು
ನುಡಿಗಳು ಎಲ್ಲಾ ಮಕ್ಕಳಿಗೆ. ಪ್ರೋತ್ಸಾಹಕರಿಗೆ ಒಬ್ಬ ಮಗು
ಗಿದ್ದವು. ಒಂದು ಪುಸ್ತಕ, ಒಂದು ಪೆನ್ನು ಸಾರಂತೆ ಕೊಡಲು ಬಂದ
ಬನ ಭವಿಷ್ಯ ಬದಲಿಸಲು ನೀವು ಅವುಗಳನ್ನೇ ಮಾಡಿಕೊಡಲು ಬಂದ
ವರಾಗಿದ್ದರಿಂದ ನಮಗೆ ಭವಿಷ್ಯದ ದಾರಿ ಕಣ್ಣುಗಳಲ್ಲಿ ನೀರು.
ವಂತೆ ಕಾಣತೊಡಗಿತು. ಎಷ್ಟೋ ಪೋಷಕರ ತರಂಗ. ಶ್ರೀಗಂಧ
ಮಕ್ಕಳ ಮುಖದಲ್ಲಿ ಒಂದು ಕಳೆ. ಸಂತೋಷ ಹಬ್ಬದ
ವೆಂಕಟೇಶನ ಅವರು ಬರುತ್ತಾರೆ ಎಂದರೆ ಶಾಲೆಯಲ್ಲಿ ಸಾಧ್ಯವ
ವಾತಾವರಣ. ನಿಮ್ಮ ಈ ಸಹಕಾರವನ್ನು ಮಾತಲ್ಲಿ ಎಂಬುದ
-ರೆಯಲಾಗುವುದಿಲ್ಲ. ಇಲ್ಲಿ ಎಂಬುದನ್ನು ವರೆಸಿ. ಇದೆ
ನ್ನು ತಿಳಿಸಿ. ಅರಿವೆಗುರು ಎಂದು ಸಕಾರಗೊಳಿಸುವ
ಸುಂದರ ಶಿಲ್ಪಗಳು ನೀವು. ನಿಮ್ಮ ಈ ಒಂದು ಕಾರ್ಯ, ನಿಮ್ಮ
ಸಹಕಾರ ಹೀಗೆ ಮುಂದುವರೆಯಲಿ ನಿಮ್ಮ ಸಂಸ್ಥೆ ಇನ್ನೂ
ಗಗನಚುಂಬಿಯಾಗಲಿ. ಇನ್ನೂ ಎತ್ತರವಾಗಿ ಬೆಳೆದು ಹೆಮ್ಮರ
ಸ್ವನ ಕಾಣಲಿ. ನಮ್ಮಂತವರಿಗೆ ಆಸರೆಯಾಗಲಿ. ಅಜ್ಞಾನವೆಂಬ
ಅಂಧಕಾರದ ಕತ್ತಲನ್ನು ತೊಳೆದು ಹಾರುವ ದೀಗುಲದ ಬೆಳಕ
ನ್ನು ಹರಿಸುವವರಾದ ನಿಮಗೆ ಒಳ್ಳೆಯದಾಗಲಿ.

ಧನ್ಯವಾದಗಳು.

- ಕೃಷ್ಣ ನಾಯ್ಕ. ನಮಟಗಾರು
- ಅಧ್ಯಕ್ಷರು
2021 - 2023

ಅನಿಸಿಕೆಯನ್ನು ಬರೆಯಲು ಹೊರಟರೆ ಹೃದಯತುಂಬಿ ಬರುತ್ತದೆ. ಈ ಹತ್ತು ವರ್ಷದ ನಂಟಿನ ಬಗ್ಗೆ ಒಂದು ಕೃತಜ್ಞತಾ ಮಾತೆ ಚಿಕ್ಕದಾಗುತ್ತದೆ. ನಮಗೆ ಸಹಕಾರ ನೀಡುತ್ತಿರುವ ಶ್ರೀಗಂಧ ಬಳಗದೊಂದಿಗಿನ ಈ ಸಂಭ್ರಮ ಹತ್ತು ವರ್ಷದ ಪೂರ್ಣದೊಂದಿಗೆ ಜೊತೆಯಾಗಿದೆ ಎಂಬುದು ನಿಜಕ್ಕೂ ಅಚ್ಚರಿ. ಇಂದಿನ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ ಎಂಬುದು ನಿಜಕ್ಕೂ ನನಗೆ ಹೆಮ್ಮೆಯ ಸಂಗತಿ. ನಮ್ಮ ಶಾಲೆಯಲ್ಲಿ ಓದುತ್ತಿದ್ದ ಮಕ್ಕಳಿಗೆ ನಿರಂತರವಾಗಿ ಪಠ್ಯ ಚಟುವಟಿಕೆ-ಗಳಿಗೆ ಸಂಬಂಧಪಟ್ಟಂತಹ ಉಪಕರಣಗಳಾದ ಪುಸ್ತಕ, ಪೆನ್ನು, ಪೆನ್ಸಿಲ್ ಮತ್ತು ಬ್ಯಾಗ್ ಇತ್ಯಾದಿಯನ್ನು ಉಚಿತವಾಗಿ ಕೊಡುಗೆ ನೀಡಿದ್ದಲ್ಲದೆ, ಮಕ್ಕಳು ಆಧುನಿಕವಾಗಿ ತಜ್ಞರಾಗಬೇಕೆಂಬ ಹಂಬಲದಿಂದ ಕಂಪ್ಯೂಟರ್‌ಗಳ ಸೌಲಭ್ಯವನ್ನು ಸಹ ಮಾಡಿಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ ಸ್ಥಾಪನೆಯಾದಂತಹ ಶ್ರೀಗಂಧ ಫೌಂಡೇಶನ್‌ನ ಕೊಡುಗೆ ಶಿವಮೊಗ್ಗ ಜಿಲ್ಲೆಯ, ಹೊಸನಗರ ತಾಲೂಕಿನ ಮುತ್ತುಹಳ್ಳಿ ಗ್ರಾಮದ ಸಿಮುಲಗಾರು ಶಾಲೆಯ ವರೆಗೆ ತಲುಪಿದೆ ಎಂದರೆ ನಿಜಕ್ಕೂ ನಾವು ಭಾಗ್ಯವಂತರು ಹೀಗೆ ಅದೆಷ್ಟೋ ಸರ್ಕಾರಿ ಶಾಲೆಗಳಿಗೆ ಆಸರೆಯಾಗಿರುವ ನಿಮಗೆ ನಾನೆಂದಿಗೂ ಚಿರಋಣಿ. ಸ್ವತಃ ನೀವೇ ಬಂದು ಬೆಂಬಲಿಸುತ್ತಿರುವ ಈ ಕಾರ್ಯಕ್ಕೆ ಸರಿಸಾಟಿ ಇಲ್ಲದಾಗಿದೆ. ಅನೇಕ ಮಕ್ಕಳ ಜೀವನ ವೃದ್ಧಿಗೊಳಿಸಲುವಲ್ಲಿ ನಿಮ್ಮದು ಮೇಲು ಪಾತ್ರವೇ ಇದೆ. ನಮ್ಮ ಮಕ್ಕಳು ಎಂದಿಗೂ ನಿಮ್ಮ ಸಹಕಾರವನ್ನು ಮರೆಯುವುದಿಲ್ಲ ನಿಮ್ಮ ಆಶೀರ್ವಾದ, ಬೆಂಬಲ ಹೀಗೆ ಸದಾ ಇರಲಿ ಎಂದು ಆಶಿಸುತ್ತೇನೆ.

– ಈಶ್ವರ್, ಅಧ್ಯಕ್ಷರು

# ಶ್ರೀಗಂಧ ಬಳಗ

ಶ್ರೀಗಂಧ ಬಳಗದ ಎಲ್ಲಾ ಗುರುಗಳಿಗೆ ನನ್ನ ನಮಸ್ಕಾರಗಳು ಹಾಗೂ ನಮ್ಮ ಸೆಯಿಟನರು ಶಾಲೆಯ ಎಲ್ಲಾ ಟೀಚರ್ ಮತ್ತು ಸರ್ ಎಲ್ಲರಿಗು ನನ್ನ ನಮಸ್ಕಾರಗಳು. ಶ್ರೀಗಂಧ ಬಳಗದವರು ನಮ್ಮ ಶಾಲೆಗೆ ಪ್ರತಿ ವರ್ಷ ಮಕ್ಕಳಿಗೆ ಪೆನ್ನು ಪುಸ್ತಕ ಹೀಗೆ ನಾನಾರೀತಿಯ ವಸ್ತುಗಳನ್ನು ಕೊಟ್ಟು ತುಂಬಾ ಸಹಾಯ ಮಾಡಿರುತ್ತಾರೆ. ಹಾಗೂ ಕೆಲವು - ಮಕ್ಕಳಿಗೆ ಅವರ ತಂದೆ ತಾಯಿಯರಿಗೆ ಓದಿಸಲು ಕಷ್ಟವಾದಲ್ಲಿ ಅಥವಾ ನಮ್ಮ ಮಕ್ಕಳು ಕಾಲೇಜಿಗೆ ತುಂಬಾ ದೂರ ಹೋಗಬೇಕಾಗುವಲ್ಲಿ ನಮ್ಮ ಶ್ರೀಗಂಧ ಬಳಗದ ಗುರುಗಳು ಮಕ್ಕಳಿಗೆ ತುಂಬಾ ತುಂಬಾ - ಸಹಾಯ ಮಾಡಿರುತ್ತಾರೆ. ಗುರುಗಳೆ ನಮ್ಮ ಟೀಚರ್ಸ್ ಹಾಗು ಸರ್ ಇವರಿಗೂ ನಿಮ್ಮಿಂದ ತುಂಬಾ ಸಹಾಯ ವಾಗಿರುತ್ತದೆ. ನಮ್ಮ ಟೀಚರ್ಸ್ ಹಾಗೂ ಸರ್ ಇವರ ಗುಣ, ನಡತೆ ಇವರ ಒಳ್ಳೆತನ ಹಾಗೂ ಶಾಲೆಗೆ ಯಾರಾದರು ಗೆಸ್ಟ್ ಬಂದರೆ ನೆಂಟರ ತರ ಸಂಭ್ರಮ ಸಡಗರದಿಂದ - ಮಾತನಾಡಿಸುವುದು ಇವರ ಗುಣ ನಡತೆ ನೋಡಿ ಯಾರಾದರು ಶಾಲೆಗೆ ಹೋಗತ್ತಾ ಹೋಗುತ್ತಲೆ ಇರೋಣ ಅನಿಸುತ್ತದೆ. ಈ ತರ ಎಲ್ಲಾ ಶಾಲೆಯಲ್ಲೂ ಸಿಗೋದಿಲ್ಲ. ಇದೆಲ್ಲಾ ಎಲ್ಲಾ ಶಿಕ್ಷಕರ ಅದೃಷ್ಟ!

ಶಿಕ್ಷಕರೆಂದರೆ ಅಸಂಖ್ಯಾತ ವಿದ್ಯಾರ್ಥಿಗಳ ಬೆಳವಣಿಗೆಯ ವಿವಿಧಹಂತಗಳ ಮೂಲಕ ಮಾರ್ಗದರ್ಶನ ನೀಡುವ ಮತ್ತು ಪ್ರಪಂಚದ ಮಾರ್ಗಗಳ ಬಗ್ಗೆ ಜ್ಞಾನೋದಯ ನೀಡುವ ತತ್ವಜ್ಞಾನಿ. ಶಿಕ್ಷಕರು ವಿದ್ಯಾರ್ಥಿಗಳ ಜ್ಞಾನ ಮತ್ತು ಕೌಶಲ್ಯ ಮಟ್ಟವನ್ನು ಮತ್ತು ಆತ್ಮವಿಶ್ವಾಸವನ್ನು ಸುಧಾರಿಸಲು ಸಹಾಯ ಮಾಡುತ್ತಾರೆ. ವಿದ್ಯಾರ್ಥಿಗಳು ಸಮಾಜದಲ್ಲಿ ಯಶಸ್ಸು ಪಡೆಯಲು ಸರಿಯಾದ ಆಕಾರದಲ್ಲಿ ವಿದ್ಯಾರ್ಥಿಗಳನ್ನು ರೂಪಿಸುತ್ತಾರೆ. ಮಕ್ಕಳು ತಮ್ಮ ಪೋಷಕರನ್ನು ಹೊರತು ಪಡಿಸಿ ಶಿಕ್ಷಕರೊಂದಿಗೆ ಇಡೀ ದಿನವನ್ನು ಕಳೆಯುತ್ತಾರೆ.

ವಿದ್ಯೆಗಿಂತ ಮಿಗಿಲಾದದ್ದು ಯಾವುದೂ ಇಲ್ಲ. ಇಂಥ ಒಂದು ವಿದ್ಯೆಗೆ ಸಹಾಯ ಮಾಡುತ್ತಿರುವ ದೊಡ್ಡ ಮನಸ್ಸಿನ ದೊಡ್ಡ ವ್ಯಕ್ತಿಗಳಾದ

*ಶ್ರೀಗಂಧ ಕನ್ನಡ ಬಳಗದವರು ನಮಗೆ 10 ವರ್ಷದಿಂದ ಪುಸ್ತಕ, ಪೆನ, ಪೆನ್ಸಿಲ ಇತ್ಯಾದಿ ವಸ್ತುಗಳನ್ನು ಫ್ರಿಯಾಗಿ ಕೊಡುತ್ತಿದ್ದಾರೆ.

*ಇವರು ಪ್ರತಿ ವರ್ಷ ನಮ್ಮ ಶಾಲೆಗೆ ಬರುತ್ತಾರೆ.

*ನಮ್ಮ ಶಾಲೆಯ ಪರಿಸರವನ್ನೆಲ್ಲ ನೋಡಿ ಖುಷಿಪಟ್ಟು ನಮಗೆ ಈ ಎಲ್ಲಾ ವಸ್ತುಗಳನ್ನು ನಮಗೆ ನೀಡುತ್ತಿದ್ದಾರೆ.

* ನಾವು ಈ ಶಾಲೆಗೆ ಬಂದಾಗಿನಿಂದಲು ಯಾವ ವಸ್ತುವಿಗೂ ಹಣ ಖರ್ಚು ಮಾಡಿಲ್ಲ.

* ನೀವು ಇದನ್ನೆಲ ಕೊಡುತ್ತಿರುವುದಕ್ಕೆ ನಾವು ನಿಮಗೆ ಧನ್ಯವಾದ ಹೇಳುತ್ತೇವೆ.

* ನಾನು ಈಗ 7ನೇ ತರಗತಿಯಲ್ಲಿ ಓದುತ್ತಿದ್ದೇನೆ.

* ನನಗೆ ಮುಂದಿನ ವರ್ಷದಿಂದ ಈ ಸೌಲಭ್ಯ ಸಿಗುವುದಿಲ್ಲ.

* ನೀವು ನಮ್ಮ ಶಾಲೆಗೆ 2 ಕಂಪ್ಯೂಟರ ಹಾಗು ರೋಬೋಟಿಕ್ ಲ್ಯಾಬ ಕೊಟ್ಟಿದ್ದೀರಿ.

* ನೀವು ಚೆನ್ನಾಗಿರಿ.

ಧನ್ಯವಾದಗಳು

ನೀವು ನಮ್ಮ ಮಕ್ಕಳ ಶಾಲೆಗೆ ಬಂದು ಈ ವರ್ಷಕ್ಕೆ 10 ವರ್ಷವಾಯಿತು. ನೀವು ಈ ಶಾಲೆಗೆ ಬಂದಿರುವುದರಿಂದ ನಾವು ನಮ್ಮ ಮಕ್ಕಳಿಗೆ ಒಂದು ಪುಸ್ತಕವನ್ನು ಕೊಡಿಸಿಲ್ಲ. ನೀವು ನಮ್ಮ ಮಕ್ಕಳಿಗೆ ಉಚಿತವಾಗಿ ಪುಸ್ತಕ. ಪೆನ್ನು. ಪೆನ್ಸಿಲ್ ಗಳನೆಲ್ಲ ಕೊಡುತ್ತೀರಿ.

ಪುಸ್ತಕವನ್ನು ಮರಗಳಿಂದ ಮಾಡುತ್ತಾರೆ. ಮರಗಳು ನಮಗೆ ಇಷ್ಟು ಮುಖ್ಯವೋ ಅಷ್ಟೇ ಪುಸ್ತಕವು ಮುಖ್ಯ ಎಂಬುದನ್ನು ನಮ್ಮ ತಿಳಿಸಿಕೊಟ್ಟಿದ್ದೀರಿ. ನೀವು ನಮ್ಮ ಶಾಲೆಗೆ ಬರುವ ದಿನ ಮಕ್ಕಳೆಲ್ಲ ಸಂತೋಷದಿಂದ ಬರುತ್ತಾರೆ. ನಿಮ್ಮಿಂದ ನಮ್ಮ ಎರಡು ಮಕ್ಕಳಿಗೆ ಸಹಾಯವಾಗಿದೆ. ನಿಮ್ಮಿಂದ ನಮಗೆ ಬಹಳ ಸಹಾಯವಾಗಿದೆ. ನಿಮ್ಮನ್ನು ದೇವರು ಚೆನ್ನಾಗಿ ಇಟ್ಟಿರಲಿ.

ಶ್ರೀಗಂಧ ಕನ್ನಡ ಬಳಗ ಫೌಂಡೇಶನರವರು ನಮ್ಮ ಮಕ್ಕಳಿಗೆ 10 ವರ್ಷದಿಂದ ಪುಸ್ತಕ, ಪೆನ್ನುಗಳನ್ನು ಕೊಡುತ್ತಿದ್ದಾರೆ. ಮತ್ತು ನಾವು ಪುಸ್ತಕ ಪೆನ್ನುಗಳನ್ನು ಕೊಳ್ಳುವ ಅವಶ್ಯಕತೆಯಿಲ್ಲ. ಶ್ರೀಗಂಧ ಕನ್ನಡ ಬಳಗ ಫೌಂಡೇಶನರವರು ಬಂದಾಗ ನಮ್ಮ ಮಕ್ಕಳಿಗೆ ಹೊಸ ಹೊಸ ವಿಷಯದ ಬಗ್ಗೆ ಹೇಳುತ್ತಾರೆ.

ಶ್ರೀಗಂಧ ಬಳಗದವರು ನಮ್ಮ ಶಾಲೆಗೆ ಭೇಟಿ ನೀಡಿದರು. ನಮ್ಮ ಮಕ್ಕಳಿಗೆ ಬೇರೆ ತರಹದ ಒಗಟು ಅಥವಾ ಪ್ರಶ್ನೆಗಳನ್ನು ಹೇಳಿ ನಮ್ಮ ಮಕ್ಕಳಿಗೆ ಇನ್ನೂ ಜಾಸ್ತಿ ಕಲಿಕೆಯ ಬಗ್ಗೆ ಇನ್ನೂ ಜಾಸ್ತಿ ಆಸಕ್ತಿ ಮತ್ತು ಪ್ರೋತ್ಸಾಹ ಕೊಡುತ್ತಾರೆ. ನಮ್ಮ ಮಕ್ಕಳಿಗೆ ಮತ್ತು ಶಾಲೆಗೆ ಸಹಾಯ ಮತ್ತು ಪ್ರೋತ್ಸಾಹ ನೀಡುತ್ತಾರೆ. ನಮಗೆ ತುಂಬಾ ಸಂತೋಷವಾಗುತ್ತದೆ.

ಎಲ್ಲರಿಗೂ ನಮಸ್ಕಾರ ಶ್ರೀಗಂಧ ಬಳಗದವರಿಗೆ ತುಂಬು ಹೃದಯದ ಧನ್ಯವಾದಗಳು. ನಿಮ್ಮ ಸಹಕಾರದಿಂದಾಗಿ ತುಂಬಾ ಉಪಕಾರವಾಗುತ್ತಿದೆ. ನಮ್ಮ ಮನೆಯಿಂದ ಮೂರು ಜನ ಮಕ್ಕಳು ಬರುತ್ತಿದ್ದಾರೆ. ಮಳೂರಿಂದ ಓಬಿಂಗಿಯಲ್ಲಿ ಕಳುಹಿಸುತ್ತಿದ್ದೇವೆ. ನಮ್ಮ ಮಕ್ಕಳಿಗೆ ನೀವು ಪೆನ್ನು, ಪುಸ್ತಕ, ಪೆನ್ಸಿಲ್ ಕೊಡುವುದರಿಂದ ತುಂಬಾ ಉಪಕಾರವಾಗುತ್ತಿದೆ. ನಿಮ್ಮ ಸಹಕಾರದಿಂದಾಗಿ ನಾವು ಅಂಗಡಿಯಿಂದ ಒಂದು ಪುಸ್ತಕವನ್ನೂ ಕೊಂಡಿಲ್ಲ. ನಿಮ್ಮ ಸಹಕಾರ ಹೀಗೆ ಸದಾ ಇರಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ನೀವು ನಮ್ಮ ಶಾಲೆಗೆ ಬಂದು ಈ ವರ್ಷಕ್ಕೆ 10 ವರ್ಷವಾಯಿತು. ನೀವು ನಮ್ಮ ಮಕ್ಕಳಿಗೆ ಪುಸ್ತಕವನ್ನು ಕೊಡದಿದ್ದರೆ ನಾವು ನಮ್ಮ ಮಕ್ಕಳಿಗಾಗಿ ಪುಸ್ತಕವನ್ನು ಕೊಳ್ಳಬೇಕಾಗಿತ್ತು. ನೀವು ನಮ್ಮ ಮಕ್ಕಳಿಗೆ ಉಚಿತವಾಗಿ ಪುಸ್ತಕವನ್ನು ಕೊಡುವುದರಿಂದ ನಮಗೆ ತುಂಬಾ ಸಹಾಯವಾಗುತ್ತಿದೆ. ನಿಮ್ಮ ಶ್ರೀಗಂಧ ಬಳಗದ ಎಲ್ಲಾ ಸದಸ್ಯರಿಗೂ ಕೋಟಿ ಕೋಟಿ ವಂದನೆಗಳು.

ಎಲ್ಲರಿಗೂ ನಮಸ್ಕಾರ ಶ್ರೀಗಂಧ ಬಳಗದಿಂದ ನಮಗೆ ತುಂಬಾ ಖುಷಿಯಾಗುತ್ತದೆ ನಾನು ನಾವ ಮಗಳನ್ನು 3 ವರ್ಷದಿಂದ ಸಮಟಿಗಾರು ಶಾಲೆಗೆ ಕಳಿಸುತ್ತಿದ್ದೆನೆ ನಾವು ಬಂದು ದಿನವು ನಾವು ಬುಕ್, ಪೆನ್ಸಿಲ್, ರಬ್ಬರ, ಪೆನ ಇತ್ಯಾದಿ ವಸ್ತುಗಳನ್ನು ಕೊಡುವುದರಿಂದ ನಮಗೆ ತುಂಬಾ ಸಹಕಾರವಾಗಿದೆ.

ನೀವು ನಮ್ಮ ಶಾಲೆಗೆ ಬಂದರೆ ತುಂಬಾ ಸಂತೋಷವಾಗುತ್ತದೆ ನೀವು ಪೆನ್ನು ಬರತ್ತೀರಿಯಂದು ಕೇಳಿ ತುಂಬಾ ಖುಷಿಯಾಯಿತು.

ಶ್ರೀಗಂಧ ಬಳಗದವರನ್ನು ನಾವು ಮರೆಯಬಾರದು ನಾನು ನಿಮ್ಮ ನಿಮ್ಮ ಸಹಾಯ ನೋಡಿ ನಮ್ಮ ಮಕ್ಕಳು ನಿಮ್ಮಂತೆ ಆಗಲಿ ಎಂದು ಹೇಳುತ್ತೇನೆ.

ನೀವು ನಮ್ಮ ಮಕ್ಕಳ ಶಾಲೆಗೆ ಬಂದು 10 ವರ್ಷವಾಯಿತು ಎಂದು ಕೇಳಿ ತುಂಬಾ ಸಂತೋಷವಾಯಿತು